**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 174/2019**

ಚಾ.ಸಾ–01, ಪ್ರಾ.ಸಾ–01

| | | |
|---|---|---|
| ಹೆಸರು | : | ಮೋಹನ್ ಕುಮಾರ್ ಜೆ.ಸಿ. |
| ತಂದೆಯ ಹೆಸರು | : | ಚಾಮಯ್ಯ |
| ವಯಸ್ಸು | : | 37 |
| ವೃತ್ತಿ | : | ನಿಲಯ ಪಾಲಕ, ಮದ್ದೂರು |
| ವಾಸ | : | ಮದ್ದೂರು ಪಟ್ಟಣ |

**ದಿನಾಂಕಃ 06.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿತನ ಪರಿಚಯವಿದೆ. ಚಾಸಾ–2 ರಿಂದ 6 ರವರ ಪರಿಚಯವಿದೆ.

ನಾನು 2007 ರಿಂದ 18.06.2019 ರವರೆಗೆ ಕೊತ್ತೇಗಾಲ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 30.03.2017 ರಂದು ಸಂಜೆ 3.45 ಗಂಟೆ ಸಮಯದಲ್ಲಿ ಕೊತ್ತೇಗಾಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿ ನಾನು ಇದ್ದಾಗ, ಆರೋಪಿತ ನನ್ನ ಮೇಲೆ ಏಕಾಏಕಿ ಅವಾಚ್ಯ ಶಬ್ದಗಳಿಂದ ಬೈದು, ನನ್ನನ್ನು ಉದ್ದೇಶಿಸಿ ಸದರಿ ಶಾಲೆ ನನ್ನ ಅಪ್ಪನ ಆಸ್ತಿಯಾ ಎಂದು ಹೇಳಿ, ಬೋಳಿ ಮಗ, ಸೂಳೇ ಮಗ ಎಂದು ಹೇಳಿ, ನನ್ನನ್ನು ಕೊಲೆ ಮಾಡುವುದಾಗಿ ಹೇಳಿರುತ್ತಾರೆ.

ಆರೋಪಿತ ನನ್ನ ಎಡಭುಜವನ್ನು ಡೆಸ್ಕಿಗೆ ಗುದ್ದಿಸಿ, ನನ್ನ ಹಿಂಭಾಗಕ್ಕೆ ಬ್ಲೇಡ್‌ನಿಂದ ಹೊಡೆದು, ನನ್ನ ಬಟ್ಟೆಯನ್ನು ಹರಿದು ಗಾಯ ಮಾಡಿರುತ್ತಾನೆ. ಕೊಠಡಿಯಲ್ಲಿದ್ದ ಕಡತಗಳನ್ನು ಚೆಲ್ಲಾಪಿಲ್ಲಿ ಮಾಡಿರುತ್ತಾನೆ.

ಶಾಲೆಯ ಶಿಕ್ಷರು ಗಲಾಟೆಯನ್ನು ಬಿಡಿಸಲು ಪ್ರಯತ್ನಿಸಿದರು ಕೂಡ ಆರೋಪಿತ ನನ್ನನ್ನು ಬಿಡದೆ ಅಂತಿಮವಾಗಿ ಆತನೊಂದಿಗೆ ಬಂದಿದ್ದವರು ಆತನನ್ನು ಕರೆದುಕೊಂಡು ಹೋದರು.

ಆರೋಪಿತ ಶಾಲೆಯ ಕಾಂಪೌಂಡ್ ಮೇಲೆ ಕುಳಿತುಕೊಂಡು, ಶಾಲೆಯ ಹೆಣ್ಣುಮಕ್ಕಳನ್ನು ರೇಗಿಸುತ್ತಿದ್ದು, ಅದಕ್ಕೆ ಆತನಿಗೆ ನಾನು ತಿಳುವಳಿಕೆ ಹೇಳಿದ್ದು, ಅದರಿಂದ ಕುಪಿತಗೊಂಡು ಆರೋಪಿತ ನನ್ನ ಮೇಲೆ ಗಲಾಟೆ ಮಾಡಿರುತ್ತಾನೆ.

ನಂತರ ಚಾಸಾ–6 ರವರ ಅನುಮತಿಯನ್ನು ಪಡೆದುಕೊಂಡು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ಆನಂತರ ನಾನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

ದಿನಾಂಕ 31.03.2017 ರಂದು ಪೊಲೀಸರು ಘಟನಾ ಸ್ಥಳಕ್ಕೆ ಶಾಲೆಯ ಬೆಳಗಿನ ಅವಧಿಯ ಸಮಯದಲ್ಲಿ ಬಂದು ನಾನು ತೋರಿಸಿದಂತೆ ಘಟನಾ ಸ್ಥಳವನ್ನು

ಪರಿಶೀಲಿಸಿ ಸದರಿ ಬ್ಲೇಡ್‌ನ್ನು ಜಪ್ತಿಪಡಿಸಿ, ಪಂಚನಾಮವನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು.

ಆ ವೇಳೆಗೆ ಶಾಲೆಯ ಶಿಕ್ಷಕರು ಮತ್ತು ಚಾಸಾ-4 ರವರು ಇದ್ದರು. ಪೊಲೀಸರು ಪಂಚನಾಮದ ವೇಳೆಗೆ ಬ್ಲೇಡಿನ ಜೊತೆಗೆ ನನ್ನ ಅಂಗಿ ಮತ್ತು ಬನಿಯನ್‌ನ್ನು ಜಪ್ತಿಪಡಿಸಿದರು. ಅವುಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಬ್ಲೇಡ್‌ನ್ನು ಎಂಒ.1 ಎಂದು, ಅಂಗಿಯನ್ನು ಎಂಒ.2 ಎಂದು ಮತ್ತು ಬನಿಯನ್‌ನ್ನು ಎಂಒ.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಎಂ.ಎನ್. ವಕೀಲರಿಂದ ಆರೋಪಿತರ ಪರ**

2017 ರಲ್ಲಿ ಸದರಿ ಶಾಲೆಯಲ್ಲಿ ನಾನು ಖಾಯಂ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ವೇಳಗೆ ನಾನು ಆ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕನಾಗಿದ್ದೆ. ಘಟನೆಯ ದಿನ ಶಾಲೆಗೆ ನಾನು ಬೆಳಿಗ್ಗೆ 9.20 ಗಂಟೆಗೆ ಹೋಗಿದ್ದೆ. ನಾನು ಶಾಲೆಗೆ ಹೋದ ತಕ್ಷಣ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿದ್ದೆ. ಕರ್ತವ್ಯವನ್ನು ಮುಗಿಸಿ ಸಂಜೆ ಹೋಗುವಾಗ ಸಂಜೆ ಹಾಜರಾಗಿ ಪುಸ್ತಕಕ್ಕೆ ಮಾಡುವುದಿಲ್ಲ, ಮಧ್ಯಾಹ್ನದ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುತ್ತೇವೆ. ನಾನು ಘಟನೆಯ ದಿನ ಆ ಶಾಲೆಯಲ್ಲಿ ಕರ್ತವ್ಯದಲ್ಲಿದ್ದೆ ಎಂದು ತೋರಿಸಲು ಹಾಜರಾತಿ ಪುಸ್ತಕದ ಪ್ರತಿಯನ್ನು ಪೊಲೀಸರಿಗೆ ನೀಡಿದ್ದೇನೆ. ಆ

ಪ್ರತಿಯನ್ನು ಕೊಡುವಂತೆ ಪೊಲೀಸರು ನನಗೆ ಬರವಣಿಗೆ ಮೂಲಕ ಮಾಡಿರಲಿಲ್ಲ, ಮೌಖಿಕವಾಗಿ ಕೇಳಿದ್ದರು. ಘಟನೆಯ ಮರುದಿನ ನಾನು ಆ ಪ್ರತಿಯನ್ನು ಪೊಲೀಸರಿಗೆ ನೀಡಿದ್ದೇನೆ.

ನನಗೆ ಆಗ ಕ್ಷೇತ್ರ ಶಿಕ್ಷಣಾಧಿಕಾರಿ ಮೇಲಾಧಿಕಾರಿಯಾಗಿದ್ದರು ಎಂದರೆ ಸರಿ. ಘಟನೆಯ ಕುರಿತು ಅವರಿಗೆ ಬರವಣಿಗೆಯಲ್ಲಿ ಮಾಹಿತಿಯನ್ನು ಘಟನೆಯ ದಿನವೇ ನೀಡಿದ್ದೆ.

ಸದರಿ ಶಾಲಾ ಸಮಯ ಬೆಳಿಗ್ಗೆ 9.50 ರಿಂದ ಸಂಜೆ 4.15 ಗಂಟೆವರೆಗೆ ಆಗಿತ್ತು. ಸದರಿ ಶಾಲೆಯ ಒಟ್ಟು ವಿಸ್ತೀರ್ಣ ಸುಮಾರು 100 ಕ್ಕಿಂತ ಹೆಚ್ಚು ಅಡಿ ಅಗಲ ಮತ್ತು ಉದ್ದವಿದೆ. ಅಲ್ಲಿ 7 ಶಾಲಾ ಕೊಠಡಿಗಳಿವೆ. ಅಲ್ಲಿ ನನ್ನನ್ನು ಸೇರಿ ಮೂರು ಜನ ಶಿಕ್ಷಕರು ಇದ್ದರು. ಏಕ ಕಾಲಕ್ಕೆ ಒಂದು ತರಗತಿಗೆ ಒಮ್ಮೆ ಪಾಠ ಮಾಡಬೇಕು ಎಂದರೆ ಸರಿಯಲ್ಲ.

ಘಟನೆಯ ದಿನ ಆರು ಮತ್ತು ಏಳನೆಯ ತರಗತಿ ಮಕ್ಕಳಿಗೆ ಪಾಠ ಮಾಡುತ್ತಿದ್ದೆ. ಆ ಎರಡೂ ತರಗತಿಯ ಮಕ್ಕಳಿಗೆ ಬೇರೆ ಬೇರೆ ಪಠ್ಯಪುಸ್ತಕವಿತ್ತು, ಆದರೂ ಸಾಮ್ಯತೆ ಇತ್ತು. ನಾನು ಪಾಠ ಮಾಡುತ್ತಿದ್ದ ಕೊಠಡಿಯಲ್ಲಿ ಸುಮಾರು 10 ರಿಂದ 15 ಮಕ್ಕಳಿದ್ದರು.

ಆರೋಪಿತ ಶಾಲೆಯ ಕಾಂಪೌಂಡ್ ಮೇಲೆ ಕುಳಿತುಕೊಂಡು ಹೆಣ್ಣುಮಕ್ಕಳನ್ನು ರೇಗಿಸುತ್ತಿದ್ದ ಎಂದು ಯಾವುದಾದರೂ ಹೆಣ್ಣುಮಕ್ಕಳು ದೂರನ್ನು

ನನಗೆ ನೀಡಿರುತ್ತಾರೆ ಎಂದರೆ ಎಲ್ಲಾ ಹೆಣ್ಣುಮಕ್ಕಳು ನನಗೆ ಹೇಳಿದ್ದು, ನಾನು ಕೂಡ ನೋಡಿರುತ್ತೇನೆ. ಆ ಹೆಣ್ಣುಮಕ್ಕಳ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಆ ಹೆಣ್ಣುಮಕ್ಕಳು ಆ ರೀತಿಯಾಗಿ 2017 ರಲ್ಲಿ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ನನಗೆ ಹೇಳಿದ್ದರು. ಆ ಕುರಿತು ನಾನು ಪೊಲೀಸರಿಗೆ ದೂರು ನೀಡಿರಲಿಲ್ಲ, ಆರೋಪಿತನಿಗೆ ಮೌಖಿಕವಾಗಿ ತಿಳುವಳಿಕೆ ಹೇಳಿದ್ದೇನೆ.

ಸರ್ಕಾರಿ ಶಾಲೆಯಲ್ಲಿ ಶಾಲಾಭಿವೃದ್ದಿ ಮೇಲ್ವಿಚಾರಕ ಸಮಿತಿ ಇರುತ್ತದೆ ಎಂದರೆ ಸರಿ. ಅದಕ್ಕೆ ಅಧ್ಯಕ್ಷರು ಮತ್ತು ಸದಸ್ಯರು ಇರುತ್ತಾರೆ. ಘಟನೆಯ ವೇಳಗೆ ಸದರಿ ಸಮಿತಿಯಲ್ಲಿ ಅಧ್ಯಕ್ಷರು ಯಾರು ಎಂದು ನನಗೆ ನೆನಪಿಲ್ಲ. ಆರೋಪಿತ ಹೆಣ್ಣುಮಕ್ಕಳನ್ನು ರೇಗಿಸುತ್ತಿದ್ದ ಬಗ್ಗೆ ಮತ್ತು ಘಟನೆಯ ಬಗ್ಗೆ ನಾನು ಆ ಅಧ್ಯಕ್ಷರಿಗೆ ಮೌಖಿಕವಾಗಿ ತಿಳಿಸಿದ್ದೆ.

ಘಟನೆಯ ಪೂರ್ವದಲ್ಲಿ ನನ್ನ ಮತ್ತು ಆರೋಪಿತನ ನಡುವೆ ಯಾವುದೇ ಮಾತುಕತೆಯಾಗಿರಲಿಲ್ಲ. ಆರೋಪಿತನ ಜೊತೆ ಮೋಹನ್ ಮತ್ತು ರಮೇಶ್ ಘಟನೆಯ ವೇಳೆಗೆ ಇದ್ದರು. ಆರೋಪಿತ ಈ ಮೇಲೆ ಹೇಳಿದಂತೆ ನನ್ನ ಮೇಲೆ ಕೃತ್ಯ ಮಾಡಿದ್ದು, ಸದರಿ ಮೋಹನ್ ಮತ್ತು ರಮೇಶ್‌ರವರು ಆತನಿಗೆ ಪ್ರಾರಂಭದಲ್ಲಿ ಸಹಕರಿಸಿದ್ದು, ಆನಂತರ ಆತನನ್ನು ಕರೆದುಕೊಂಡು ಹೋಗಿರುತ್ತಾರೆ. ದೂರಿನಲ್ಲಿ ಸದರಿ ಮೋಹನ್ ಮತ್ತು ರಮೇಶ್‌ರವರ ಹೆಸರುಗಳನ್ನು ನಮೂದಿಸಿಲ್ಲ ಎಂದರೆ ಸರಿ.

ನನ್ನ ಬೆನ್ನಿನ ಹಿಂಭಾಗದ ಕಂಕಳಿನ ಬಳಿ ರಕ್ತಗಾಯವಾಗಿತ್ತು. ಘಟನೆಯ ವೇಳೆಗೆ ನಾನು ಬನಿಯನ್ ಮತ್ತು ಅಂಗಿಯನ್ನು ಧರಿಸಿದ್ದೆ. ರಕ್ತದ ಕಲೆಗಳು ಆ ಬನಿಯನ್ ಮತ್ತು ಅಂಗಿಗೆ ಆಗಿತ್ತು. ಆರೋಪಿತ ಬ್ಲೇಡ್‌ನಿಂದ ನನಗೆ ಹಲ್ಲೆ ಮಾಡಿರುತ್ತಾನೆ. ಆ ವಿಷಯವನ್ನು ನನ್ನ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ನನ್ನ ಭುಜದಲ್ಲಿ ರಕ್ತ ಬಂದಿರಲಿಲ್ಲ. ನಾನು ಯಾವ ಬಣ್ಣದ ಬನಿಯನ್ ಮತ್ತು ಅಂಗಿಯನ್ನು ಧರಿಸಿದ್ದೆ ಎಂದು ನನ್ನ ದೂರಿನಲ್ಲಿ ಹೇಳಿದ್ದೇನೆ.

ಘಟನೆಯು ಪ್ರಾರಂಭವಾದ 5-10 ನಿಮಿಷಗಳ ನಂತರ ಶಾಲೆಯ ಇತರ ಶಿಕ್ಷಕರು ಘಟನಾ ಸ್ಥಳಕ್ಕೆ ಬಂದರು. 1 ರಿಂದ 3 ನೇ ತರಗತಿಯ ಕೊಠಡಿಯಲ್ಲಿ ಒಬ್ಬ ಮತ್ತು 4, 5 ನೇ ತರಗತಿಯಲ್ಲಿ ಇನ್ನೊಬ್ಬ ಶಿಕ್ಷಕರು ಇದ್ದರು.

ಗಲಾಟೆಯಾದ ನಂತರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಹೋಗಿ ಘಟನೆಯ ಕುರಿತು ಮಾಹಿತಿ ನೀಡಿರುತ್ತೇನೆ. ಆ ವೇಳೆಗೆ ಸಂಜೆ 5.30 ಗಂಟೆಯಾಗಿತ್ತು. ನಾನು ಆ ಶಾಲೆಗೆ ಪ್ರತಿದಿನ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿದ್ದೆ. ಆ ಶಾಲೆಯಿಂದ ತಿ. ನರಸೀಪುರದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಬರಲು ಸುಮಾರು 15-20 ನಿಮಿಷಗಳು ಬೇಕು. ನಾನು ಆ ಶಾಲೆಯನ್ನು ಸಂಜೆ 4.30 ಗಂಟೆಗೆ ಬಿಟ್ಟಿದ್ದೆ. ನಾನು ಘಟನೆಯ ದಿನ ಬೆಳಿಗ್ಗೆ ಧರಿಸಿದ್ದ ಬಟ್ಟಯಲ್ಲಿಯೇ ಸಂಜೆ ತಿ. ನರಸೀಪುರಕ್ಕೆ ಬಂದಿದ್ದೆ.

ಸದರಿ ಕಚೇರಿಯಿಂದ ಆಸ್ಪತ್ರೆಗೆ ಹೊಗಿದ್ದೆ. ಅಲ್ಲಿಗೆ ಹೋದಾಗ ಎಷ್ಟು ಗಂಟೆಯಾಗಿತ್ತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಅಲ್ಲಿ ಸುಮಾರು

ಅರ್ಧ ಗಂಟೆಯವರೆಗೆ ಇದ್ದೆ. ಅಲ್ಲಿಂದ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿಗೆ ಹೋದಾಗ ನಿಖರವಾಗಿ ಎಷ್ಟು ಸಮಯವಾಗಿತ್ತು ಎಂದು ಗೊತ್ತಿಲ್ಲ. ಅಲ್ಲಿ ಒಂದು ಗಂಟೆಗಿಂತ ಹೆಚ್ಚು ಕಾಲ ಇದ್ದೆ. ಅಲ್ಲಿಂದ ತಿ. ನರಸೀಪುರದಲ್ಲಿದ್ದ ನನ್ನ ಮನೆಗೆ ಹೋಗಿದ್ದೇನೆ. ನಾನು ಘಟನೆಯ ದಿನ ಬೆಳಿಗ್ಗೆ ಧರಿಸಿದ್ದ ಬಟ್ಟಯಲ್ಲಿಯೇ ನನ್ನ ಮನೆಗೆ ಹೋಗಿದ್ದೆ ಎಂದರೆ ಸರಿ. ನಾನು ಪೊಲೀಸ್ ಠಾಣೆಗೆ ಹೋದಾಗ ನನ್ನ ಆ ಬಟ್ಟೆಗಳನ್ನು ಕೇಳಿದ್ದರು. ಆ ವೇಳೆಗೆ ಅವರಿಗೆ ನಾನು ಬಟ್ಟೆಗಳನ್ನು ನೀಡಿರುತ್ತೇನಾ ಎಂದರೆ ನನಗೆ ನೆನಪಿಲ್ಲ.

ಘಟನೆಯ ಮರುದಿನ ಶಾಲೆಗೆ ಬೆಳಿಗ್ಗೆ 9.20 ಗಂಟೆಗೆ ಹೋಗಿದ್ದೆ. ಆ ದಿನ ನಾನು ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿದ್ದೇನೆ. ಅದರ ಪ್ರತಿಯನ್ನು ಪೊಲೀಸರು ಪಡೆದಿದ್ದಾರೆ. ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ಬೆಳಿಗ್ಗೆ 10 ಗಂಟೆಗಿಂತ ಹೆಚ್ಚು ಸಮಯವಾಗಿತ್ತು. ಆ ವೇಳೆಗೆ ಪೊಲೀಸರು ಬರವಣಿಗೆ ಮಾಡಿದ್ದಾರೆ. ಆ ಬರವಣಿಗೆಯಲ್ಲಿ ಘಟನೆಯ ಬಗ್ಗೆ ಬರೆದಿದ್ದಾರೆ. ಬರವಣೆಗೆಯನ್ನು ಗಲಾಟೆಯಾಗಿದ್ದ ಕೊಠಡಿಯಲ್ಲಿ ಮಾಡಲಾಯಿತು.

ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ 2-3 ಜನ ಪೋಲೀಸರು, ಶಾಲೆಯ ಶಿಕ್ಷಕರು, ಚಾಸಾ-4 ಮತ್ತು 5 ರವರು ಇದ್ದರು. ಚಾಸಾ-4 ಮತ್ತು 5 ರವರು ಆ ಬರವಣಿಗೆಗೆ ಸಹಿ ಮಾಡಿರುತ್ತಾರೆ. ಆ ಬರವಣಿಗೆಯಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ಕಡತಗಳ ಬಗ್ಗೆ ಪೊಲೀಸರು ಬರೆದುಕೊಂಡಿದ್ದಾರೆ. ಪೊಲೀಸರಿಗೆ ನಾನೇ ಬ್ಲೇಡ್‌ನ್ನು

ನೀಡಿರುತ್ತೇನೆ. ಅದನ್ನು ಆರೋಪಿಯಿಂದ ನಾನೇ ಕಿತ್ತುಕೊಂಡಿದ್ದೇನೆ. ಆ ವಿಷಯವನ್ನು ದೂರಿನಲ್ಲಿ ಹೇಳಿದ್ದೇನೆ. ಎಂಒ.1 ರ ಬ್ಲೇಡ್‌ನಲ್ಲಿ ಡೋಲಾರ್ ಎಂದು ನಮೂದು ಇದ್ದು, ಆ ಬಗ್ಗೆ ನಿಖರವಾಗಿ ದೂರಿನಲ್ಲಿ ನಮೂದಿಸಿದ್ದೇನೆ. ಸಾಕ್ಷಿಗೆ ಈಗ ದೂರನ್ನು ತೋರಿಸಿದ್ದು, ಅದರಲ್ಲಿ ಆ ಬಗ್ಗೆ ನಮೂದು ಇಲ್ಲ ಎಂದು ಹೇಳಿದ್ದಾರೆ.

ಸಾಮಾನ್ಯವಾಗಿ ಬ್ಲೇಡ್‌ನ್ನು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿ ಕಿತ್ತುಕೊಳ್ಳುವಾಗ ಕಿತ್ತುಕೊಳ್ಳುವ ವ್ಯಕ್ತಿಯ ಬೆರಳುಗಳಲ್ಲಿ ಚರ್ಮ ಕಿತ್ತು ಬಂದು ರಕ್ತ ಬರುತ್ತದೆ ಎಂದರೆ ಸರಿ. ನಾನು ಆರೋಪಿತನಿಂದ ಆ ರೀತಿ ಕಿತ್ತುಕೊಳ್ಳುವಾಗ ನನಗೆ ರಕ್ತ ಬಂದಿಲ್ಲ, ಆರೋಪಿತನಿಗೆ ರಕ್ತ ಬಂದಿರುವ ಬಗ್ಗೆ ಗೊತ್ತಿಲ್ಲ.

ನನಗೆ ಬೆನ್ನಿನ ಎಡಗಡೆ ಕಂಕುಳಿನ ಬಳಿ ಗಾಯವಾಗಿದೆ. ನನ್ನ ಅಂಗಿ 4-5 ಇಂಚು ಹರಿದಿತ್ತು. ನನ್ನ ಅಂಗಿಯು ಹರಿದಿದ್ದ ಜಾಗದಲ್ಲಿ ಬನಿಯನ್ ಸ್ವಲ್ಪ ಹರಿದಿತ್ತು. ಎಂಒ.2 ರ ಅಂಗಿಯಲ್ಲಿ ಹರಿದಿರುವುದು ಕತ್ತರಿಯಲ್ಲಿ ಕತ್ತರಿಸಿದಾಗ ಹರಿದ ರೀತಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ಕೆಳಗಡೆ ಒಂದರಿಂದ ಒಂದೂವರೆ ಇಂಚು ಮತ್ತು ಮೇಲೆ ಸುಮಾರು ಎರಡು ಇಂಚು ಹರಿದಿದೆ ಎಂದರೆ ಸರಿ.

ಎಂಒ.2 ರ ಅಂಗಿಯಲ್ಲಿ ರಕ್ತ ಕಲೆ ಈಗ ಇರುವುದಿಲ್ಲ. ಎಂಒ.3 ಬನಿಯನ್‌ನಲ್ಲಿ ಈಗ ರಕ್ತ ಕಲೆಯಿರುವುದಿಲ್ಲ.

ನನ್ನ ಅಂಗಿ ಮತ್ತು ಬನಿಯನ್ ಎಷ್ಟು ಇಂಚು ಎಂದು ನನಗೆ ಗೊತ್ತಿಲ್ಲ. ಎಂಒ.2 ಮತ್ತು 3 ರ ಬಟ್ಟೆಗಳು ನನಗೆ ಸೇರಿದವು ಎಂದು ತೋರಿಸಲು ಖರೀದಿಯ ಬಿಲ್ಲನ್ನು ಪೊಲೀಸರಿಗೆ ನೀಡಿಲ್ಲ.

ಕೊತ್ತೇಗಾಲ ಗ್ರಾಮವು ದೊಡ್ಡ ಗ್ರಾಮ ಎಂದರೆ ಸರಿ. 2017 ನೇ ಸಾಲಿನಲ್ಲಿ ರಮೇಶ್ ಎನ್ನುವ ವಿದ್ಯಾರ್ಥಿ ಆ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಎಂದರೆ ನನಗೆ ನೆನಪಿಲ್ಲ. ಆರೋಪಿತ, ಮೋಹನ್ ಮತ್ತು ರಮೇಶ್ ರವರು ಸದರಿ ಶಾಲೆಯ ವಿದ್ಯಾರ್ಥಿಗಳು ಎಂದರೆ ಸರಿ. ಆರೋಪಿತನ ಜೊತೆ ಸೇರದೆ ಚೆನ್ನಾಗಿ ವ್ಯಾಸಂಗ ಮಾಡಬೇಕೆಂದು ಸದರಿ ರಮೇಶನಿಗೆ ನಾನು ಆಗಾಗ ತಿಳುವಳಿಕೆ ಹೇಳುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ಏಕೆ ಚಾಡಿ ಹೇಳುತ್ತೀರಿ ಎಂದು ಆರೋಪಿತ ನನ್ನನ್ನು ಪ್ರಶ್ನಿಸಿದ್ದ ಎಂದರೆ ಸರಿಯಲ್ಲ.

ಆರೋಪಿತನ ತಂಗಿ ಅಶ್ವಿನಿ ಸದರಿ ಶಾಲೆಯಲ್ಲಿ ವ್ಯಾಸ್ಯಂಗ ಮಾಡಿದ್ದಳು ಎಂದರೆ ಸರಿ. ಸದರಿ ಗ್ರಾಮಸ್ಥರು ಮತ್ತು ಆ ಶಾಲೆಯ ವಿದ್ಯಾ ರ್ಥಿನಿಯರ ಜೊತೆ ನಾನು ಸರಿಯಾಗಿ ವರ್ತಿಸುತ್ತಿಲ್ಲವೆಂದು ಆ ಗ್ರಾಮಸ್ಥರು ನನ್ನ ಮೇಲೆ ಆರೋಪಿಸಿದ್ದರು ಎಂದರೆ ಸರಿಯಲ್ಲ. ಆ ವಿಚಾರವಾಗಿ ಆರೋಪಿತ ನನ್ನನ್ನು ಪ್ರಶ್ನಿಸಿದ್ದ ಎಂದರೆ ಸರಿಯಲ್ಲ. ಹಾಗಾಗಿ, ಆತನ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಸಿಸಿ ಸಂಖ್ಯೆ: 174/2019**

ನಾನು ಹೇಳುವಂತೆ ಆರೋಪಿತ ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಪೊಲೀಸರಿಗೆ ಬಟ್ಟೆಗಳನ್ನು ಕೊಡುವರೆಗೂ ಅವುಗಳು ನನ್ನ ಬಳಿಯಿದ್ದವು. ನಾನು ಪೊಲೀಸರಿಗೆ ದೂರನ್ನು ನೀಡಲು ಹೋದಾಗ ಪೊಲೀಸರು ನನ್ನ ಅಂಗಿಯನ್ನು ನೋಡಿದ್ದರು. ಎಂಒ.1 ರಿಂದ 3 ಈ ಪ್ರಕರಣಕ್ಕೆ ಸಂಬಂಧಿಸರದೆ ಅವುಗಳನ್ನು ಪೊಲೀಸರೊಂದಿಗೆ ಶಾಮೀಲಾಗಿ ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**